ಅವಿಭಾಜ್ಯ ಅಂಗವಾಗಿದೆ. ನಮ್ಮ ಚರಿತ್ರೆಕಾರರು ಮಾನವಕೇಂದ್ರಿತ ಇತಿಹಾಸ ರಚನಾ ವಿಧಾನವನ್ನು ಬಿಟ್ಟು ಜೀವಿಕೇಂದ್ರಿತ ಇತಿಹಾಸವನ್ನು ಕಟ್ಟಿದರೆ ಕೋಳಿಯ ಶ್ರೀಮಂತ ಇತಿಹಾಸ ತಿಳಿದುಬರುವುದು. ಸಾಕ್ರೆಟಿಸ್‌ನಂತಹ ಮಹಾತತ್ವಜ್ಞಾನಿಯು ತನ್ನ ಕೊನೆಯ ಆಸೆಯ ರೂಪದಲ್ಲಿ ಹೇಳಿದ್ದು ತಾನು ತೀರಿಸಬೇಕಾದ ಋಣದ ಕುರಿತು. ಅದು ಹುಂಜವನ್ನು ನೀಡಬೇಕಾದ ಋಣ. ಸಾಕ್ರೆಟಿಸ್‌ನ ಋಣದ ಹುಂಜವೆಂದೆ ಆ ಕಥೆ ಜನಪ್ರಿಯವಾಗಿದೆ.

ಮಾನವ ಸಖ್ಯದೊಂದಿಗೆ ಬೆಳೆಯುವ ಕೋಳಿ ಬಡವರ ಬ್ಯಾಂಕ್. ತೀರ ಆಪತ್ಕಾಲದಲ್ಲಿ ಮಾರಾಟ ಮಾಡಿ ಹಣ ಪಡೆಯಬಹುದು. ಊರ್ಕೋಳಿ ಯಾವತ್ತೂ ತನ್ನ ಬೇಡಿಕೆಯನ್ನು ಕಳೆದುಕೊಂಡಿಲ್ಲ; ಕಳೆದುಕೊಳ್ಳುವುದೂ ಇಲ್ಲ. ಹಾಗಾಗಿ ಇದನ್ನು ಮಾರಾಟ ಮಾಡುವುದು ಸುಲಭ. ಪಟ್ಟಣದ ಎಷ್ಟೋ ಹೋಟೆಲ್‌ಗಳಲ್ಲಿ ಇಲ್ಲಿ ನಾಟಿಕೋಳಿ ಮಾಂಸ ಸಿಗುತ್ತದೆ ಎಂಬ ಬೋರ್ಡ್ ನೇತುಹಾಕಿರುವುದು ಕಂಡರೆ ನಿಮಗೆ ಇದರ ಬೇಡಿಕೆಯಷ್ಟು ಎಂದು ಅರಿವಾದೀತು. ಅನಾದಿ ಕಾಲದಿಂದಲೂ ನಮ್ಮ ಸಮುದಾಯಗಳನ್ನು ನಿದ್ದೆಯಿಂದ ಎಚ್ಚರಿಸಿದ ಅಲಾರ್ಮ್ ಎಂಬ ಹೆಗ್ಗಳಿಕೆ ಇದಕ್ಕಿದೆ. ನಮ್ಮ ಬೆಳಗು ಆರಂಭವಾಗುವುದು ಕೋಳಿಯ ಕೂಗಿನೊಂದಿಗೆ. ಗಡಿಯಾರಗಳು ಹಾಳಾಗಿ ತಮ್ಮ ಕಾರ್ಯ ಸ್ಥಗಿತಗೊಳಿಸಿರುವುದಕ್ಕೆ ಸಾಕಷ್ಟು ನಿದರ್ಶನಗಳಿವೆ. ಆದರೆ ಕೋಳಿ ತನ್ನ ಕರ್ತವ್ಯದಿಂದ ಎಂದೂ ವಿಮುಖವಾಗಿಲ್ಲ. ಕೋಳಿ ತನ್ನ ಸಂತಾನವನ್ನು ಪೊರೆಯುವುದರಲ್ಲಿನ ಕಾಳಜಿ ನಮಗೆಲ್ಲ ತಿಳಿದಿದ್ದೇ. ಹಾಗೆ ಅದು ನಮ್ಮನ್ನು ಪೊರೆಯುತ್ತಿದೆ.

ನಮ್ಮ ನುಡಿಗೆ ಕೋಳಿ ನೀಡಿದ ಕೊಡುಗೆ ಕಮ್ಮಿಯೇನಲ್ಲ. ನಮ್ಮ ನುಡಿಯಲ್ಲಿ ಬಳಕೆಯಾಗುವ ನುಡಿಗಟ್ಟಗಳು, ಸಾಹಿತ್ಯದಲ್ಲಿ ಬಳಸಿದ ಉಪಮೆಗಳನ್ನು ಒಮ್ಮೆ ಪರಿಶೀಲಿಸಿದರೆ ನಿಮಗೆ ಮನವರಿಕೆಯಾದೀತು. ಕೋಳಿ ಜಗಳ, ಕೋಳಿನಿದ್ದೆ ಎಂಬ ನುಡಿಗಟ್ಟು ಗ್ರಾಮ್ಯ ನಗರವೆಂಬ ಭೇದವಿಲ್ಲದೆ ಬಳಕೆಯಾಗುತ್ತದೆ. 'ಕಾವಿಗೆ ಕುಂತ ಹೇಂಟೆಯಂತೆ' ಎಂಬ ಉಪಮೆ ಸಾಕಷ್ಟು ಕಡೆಗಳಲ್ಲಿ ಬಳಕೆಯಾಗಿದೆ. ಕೋಳಿ ನಾಮಧೇಯ ಬೇರೆಬೇರೆ ಪ್ರದೇಶದಲ್ಲಿ ಯಾವೆಲ್ಲ ರೂಪದಲ್ಲಿ ಬಳಕೆಯಲ್ಲಿದೆ ಎಂದು ಗಮನಿಸಿದರೆ ಸಾಕು ಅದರ ನುಡಿ ವೈವಿಧ್ಯ ಅರಿವಾಗುತ್ತದೆ. ಕುಕ್ಕುಟ, ಹೇಂಟೆ, ಹೈಡಿ, ಮುರುಗಿ, ಹುಂಜ ಇವಷ್ಟೆ ಅಲ್ಲ ಕೋಳಿಪಡೆಯ ಕೋಳಿಗಳನ್ನು ಅದರ ಬಣ್ಣವನ್ನು ಆಧರಿಸಿ ಉರಿಯ, ಕಬಾರ, ಗೂಬ, ಕೆಂಬೇರ, ಕುಕ್ಕಿನಬೆಳಿಯ ಇತ್ಯಾದಿ ಹೆಸರುಗಳಿಂದ ಗುರುತಿಸಲಾಗುತ್ತದೆ. ಅಂಕದಲ್ಲಿ ಗೆದ್ದ ಕೋಳಿಯನ್ನು 'ಬಂಟ' ಎಂದು ಕರೆದರೆ ಸೋತ ಕೋಳಿಗೆ 'ವಟ್ಟೆ' ಎಂಬ ಪದದ ಮೂಲಕ ಗುರುತಿಸಲಾಗಿದೆ. ನಮ್ಮ ನುಡಿಯನ್ನು ಕೋಳಿ ವೈವಿಧ್ಯಮಯವಾಗಿಸಿದ ರೀತಿಯಿದು. ಕೋಳಿ ನಮಗೆ ಹಲವು ರೀತಿಯಲ್ಲಿ ಉಪಕಾರ ಮಾಡಿದೆ ಎಂಬುದು ಸೂರ್ಯನಷ್ಟೆ ಸ್ಪಷ್ಟ. ಅದೇ ರೀತಿ ಹಲವು ಸಂಘರ್ಷಗಳಿಗೂ ಕಾರಣವಾಗಿದೆ. ನಮ್ಮಲ್ಲಿನ ಅನೇಕರ ನೆರಮನೆಯೊಂದಿಗಿನ ಸಂಬಂಧ ಹದಗೆಡಲು ಕೋಳಿಯೇ ಕಾರಣ. ನಿಮ್ಮ ಮನೆಯ ಹಿತ್ತಲು ಎಷ್ಟೇ ದೊಡ್ಡದಿದ್ದರೂ ಕೋಳಿ ನೆರಮನೆಯ ಹಿತ್ತಿಲಿಗೆ ಹೋಗಿ ಗಲೀಜು ಮಾಡುವುದು ಅದರ ಸ್ವಭಾವ ಸಹಜ ಗುಣ. ನೆರಮನೆಯವರು ಸಸ್ಯಾಹಾರಿಗಳಾದರಂತೂ ಸಂಬಂಧ ಬಹಳ ಬೇಗ ಹಳಸುತ್ತದೆ ಎಂಬುದನ್ನು ಖಚಿತವಾಗಿ ಹೇಳಬಹುದು. ಅದು ಬೆಳಗಿನ ಜಾವ ಕೂಗುವ ಕೂಗು ಹಲವೆಡೆ ಜಗಳಕ್ಕೆ ಕಾರಣವಾಗಿದೆ. ಬೆಳಗಿನ ಜಾವದ ನಿದ್ದೆಗೆ ಅದ್ಯಾರು ಸಕ್ಕರೆನಿದ್ದೆ ಎಂದು ಕರೆದರೊ, ಅದು ನಿಜಕ್ಕೂ ಸಕ್ಕರೆಯ ನಿದ್ದೆಯೆ. ಈ ಸಕ್ಕರೆನಿದ್ದೆಗೆ ಅತಿದೊಡ್ಡ ಕಹಿಸದ್ದಾಗಿ ಕೇಳಿಸುವ ಕೊಕ್ಕಕೋವೆಂಬ ಕೋಳಿಯ ಕರ್ಕಶ ಕೂಗು. ಇದನ್ನು ಯಾರಾದರು ಸಹಿಸಲು ಸಾಧ್ಯವೆ? ಹಾಗಾಗಿ ಇಲ್ಲಿ ಜಗಳ ಸಹಜವೇ.

ಈ ಕೋಳಿಜಗಳದ ಮತ್ತೊಂದು ಸ್ವಾರಸ್ಯಕರ ಘಟನೆ ಹೇಳುತ್ತೇನೆ. ನಮ್ಮ ಪಕ್ಕದ ಮನೆಯವರ ಕೋಳಿ ಪ್ರತಿದಿನ ನೆರಮನೆಗೆ ದಾಳಿಮಾಡುವುದು ಅದರ ದಿನಚರಿಯ ಒಂದು ಭಾಗ. ಹೀಗೊಂದು